ಶ್ರೀ ಪಿ. ಎನ್. ರೆಡ್ಡಿ.— ಶಿವಾರಪಟ್ಟಣದಲ್ಲಿ ಇಡೀ ಪ್ರಪಂಚದಲ್ಲಿಯೇ ವಿಖ್ಯಾತಿ ಪಡೆದಂಥ ಶಿಲ್ಪಗಳಿರುವುದು ಸರ್ಕಾರದ ಗಮನಕ್ಕೂ ಬಂದಿದೆ ಮತ್ತು ಸರ್ವರಿಗೂ ತಿಳಿದಿದೆ. ಮತ್ತು ಇಲ್ಲಿ ಕೆತ್ತನೆ ಮಾಡಿದಂಥ ವಿಗ್ರಹಗಳನ್ನು ಪ್ರಪಂಚದ ಎಲ್ಲ ರಾಷ್ಟ್ರಗಳವರೂ ಬಂದು ಕೊಂಡುಕೊಂಡು ಹೋಗುತ್ತಿದ್ದಾರೆ. ಈಗಲೂ ಸಹ ಅಲ್ಲಿ ವಿಗ್ರಹಗಳನ್ನು ಕೊಂಡುಕೊಳ್ಳಲು ಮುಂದೆ ಬರುತ್ತಿದ್ದಾರೆ. ಆದ್ದರಿಂದ ಅಲ್ಲಿ ಒಂದು ಉತ್ಪಾದನಾ ಕೇಂದ್ರವೊಂದನ್ನು ಏತಕ್ಕೆ ತೆರೆಯಬಾರದು?

ಶ್ರೀ ಸಿ. ಎಂ. ಇಬ್ರಾಹಿಂ.—ಈಗಾಗಲೇ ಗ್ರಾಮಾಂತರ ಮಾರುಕಟ್ಟೆ ಹಾಗೂ ಸೇವಾಕೇಂದ್ರವನ್ನು ಸ್ಥಾಪಿಸಲು ಅಖಿಲಭಾರತ ಕುಶಲಕಲಾ ಮಂಡಲಿಯವರಿಂದ ಅನುಮತಿ ದೊರೆತಿದೆ. ಇದರ ಜೊತೆಗೆ ನಮ್ಮ ಕರ್ನಾಟಕ ಕುಶಲಕಲಾ ಮಂಡಲಿಯವರು ಸಹ ಒಂದು ಸೆಂಟರನ್ನು ಅಲ್ಲಿ ಪ್ರಾರಂಭ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದಾರೆ. ಆದಕಾರಣ ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆಗಳು ಈ ಮೂಲಕ ಪೂರೈಸುವುದರಿಂದ ಉತ್ಪಾದನಾ ಕೇಂದ್ರದ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇವೆ. ಈಗಾಗಲೇ ಅಲ್ಲಿನವರು ಒಂದು ಸೊಸೈಟಿ ಮಾಡಿಕೊಂಡಿದ್ದಾರೆ. ಅದಕ್ಕೆ ಸರ್ಕಾರದಿಂದ ೨೫ ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಈ ಕೆಲಸಗಳಿಂದ ಅವರಿಗೆ ಸಾಕಷ್ಟು ಅನುಕೂಲವಾಗಿಲ್ಲವೆಂದು ಮುಂದೆ ಸರ್ಕಾರಕ್ಕೆ ತಿಳಿದುಬಂದರೆ, ತಾವು ಹೇಳಿದಂಥ ಸಲಹೆಯನ್ನು ಪರಿಶೀಲನೆ ಮಾಡೋಣ.

ಶ್ರೀ ಪಿ. ಎನ್. ರೆಡ್ಡಿ.— ಸಂಘದ ಪ್ರಶ್ನೆ ಒಂದು ಕಡೆ ಇರಲಿ. ಗ್ರಾಮಾಂತರ ಮಾರುಕಟ್ಟೆ ಹಾಗೂ ಸೇವಾ ಕೇಂದ್ರವನ್ನು ಇನ್ನು ಎಷ್ಟು ದಿವಸದಲ್ಲಿ ಸ್ಥಾಪಿಸುತ್ತೀರಿ?

ಶ್ರೀ ಸಿ. ಎಂ. ಇಬ್ರಾಹಿಂ.— ಆದಷ್ಟು ಜಾಗ್ರತೆ ಸ್ಥಾಪಿಸಬೇಕೆಂಬ ಕಳಕಳಿಯನ್ನಿಟ್ಟುಕೊಂಡು ಕಳೆದ ಹದಿನೈದು ದಿವಸಗಳ ಹಿಂದೆ ಶಿಲ್ಪಿಗಳ ಮತ್ತು ಕರಕುಶಲಗಾರರ ಸಮ್ಮೇಳನವೊಂದನ್ನು ಕರೆದಿದ್ದೆವು. ಆದರಲ್ಲಿ ಸಮಗ್ರವಾಗಿ ಚರ್ಚೆ ಮಾಡಲಾಗಿದೆ ಮತ್ತು ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್‌ನನ್ನು ತಯಾರು ಮಾಡಲಾಗಿದೆ. ಸಮ್ಮೇಳನದಲ್ಲಿ ಇದನ್ನು ಆದಷ್ಟು ಬೇಗ ಸ್ಥಾಪಿಸಬೇಕೆಂದು ನಿರ್ಣಯ ಕೂಡ ಮಾಡಲಾಗಿದೆ. ಇದನ್ನು ಆದಷ್ಟು ಜಾಗ್ರತೆ ಮಾಡಲಾಗುತ್ತದೆ.

ಶ್ರೀ ಪಿ.ಎನ್. ರೆಡ್ಡಿ.— (೩) ಪ್ರಶ್ನೆಗೆ ಉತ್ತರವಾಗಿ ಈ ವರ್ಷದಲ್ಲಿ ಹತ್ತು ಜನರಿಗೆ ಶಿಲ್ಪಿಗಳ ತರಬೇತಿ ಕೊಡುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದ್ದೀರಿ. ಪ್ರಪಂಚದ ಅತ್ಯಂತ ವಿಖ್ಯಾತ ಶಿಲ್ಪಿಗಳೆಂದು ಹೆಸರು ಪಡೆದಿರುವ ಇವರಿಗೆ ಇಲಾಖೆ ವತಿಯಿಂದ ಯಾವ ರೀತಿಯ ತರಬೇತಿ ಕೊಡುತ್ತೀರಿ?

ಶ್ರೀ ಸಿ.ಎಂ. ಇಬ್ರಾಹಿಂ.ಇತ್ತೀಚೆಗೆ ಹೊಸ ಹೊಸ ವಿನ್ಯಾಸಗಳಿಗೆ ಬೇಡಿಕೆಗಳು ಬರುತ್ತಿವೆ. ಅಲ್ಲದೆ, ಒಬ್ಬ ಶಿಲ್ಪಿಯು ಪ್ರತಿಯೊಂದು ವಿನ್ಯಾಸದಲ್ಲಿಯೂ ಪ್ರವೀಣನಾಗಿರುವುದಿಲ್ಲ. ಒಬ್ಬೊಬ್ಬ ಶಿಲ್ಪಿಯು ಒಂದೊಂದು ವಿನ್ಯಾಸ ಅಥವಾ ಕಲೆಯಲ್ಲಿ ಪ್ರವೀಣರಾಗಿರುತ್ತಾರೆ. ಇಲ್ಲಿ ಅವರಿಗೆ ತಿಳಿಯದೆ ಇರತಕ್ಕ ಕಲೆ ಬಗ್ಗೆ ತರಬೇತಿ ಕೊಡಲಾಗುತ್ತದೆ. ಕಲೆಯ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಾಗಲಿ ಎನ್ನುವುದೇ ಇದರ ಉದ್ದೇಶ.

Minor Irrigation Tanks in Lingasugur, Kustagi Taluks

198. SRI M. GANGANNA (Kushtagi).— Will the Minister for Transport and Minor Irrigation be pleased to state:—

(a) the number of minor Irrigation tanks surveyed in Lingasugur and Kustagi Taluks of Raichur District (The list of villages where tank surveys have been completed be furnished).

(b) the number of tanks, the surveys of which are being taken up in the current year (the list of villages where the tanks are likely to be located may be laid on the table of the House)?

SRI M. M. J. SADYOJATHA (Minister for Transport and Minor Irrigation).—

(a) 10. The list of villages is appended (Statement 1)*

(b) The list of villages is appended (Statement 2)*

Copies placed in the Karnataka Legislative Library.

STATEMENT—1

The list of Villages where tank surveys have been completed in taluk Lingasugur and Kustagi

Sl. No.	Name of Village	Taluk	Estd. cost. (Approx.) Rs. in lakhs	Area Irrigated (Hectares)	Remarks
1	2	3	4	5	6
1	New tank near village Yeigunti	Lingsugur	15.98	200	The work is budgetted during 79-80 technical sanction accorded vide Chief Engineer, MI & PHE. (North) Dharwad vide No. IPH/IGN/I/33/77-78/11960, dated 28-1-1980.
2	New tank near Julgudda	do	15.00	250	Budgetted during 79-80, Plans and estimates under scrutiny in the division office.
3	New tank near Buddinni	do	8.00	133	The work is included in the World Bank Assistance Programme. Detailed survey completed. Plans and estimates under preparation in the sub-division.
4	New tank near Phulbhavi	do	9.20	153	-do-
			48.18	736	

5	New tank near Manedhal	Kushtagi	5.00	150	The work is budgetted during 79-80. Administratively approved and technically sanctioned by Chief Engineer, MI & PHE (North), Dharwad No. 10598 dated 26-12-1979.
6	New tank near Mensigera	do	4.00	67	The work is budgetted during 79-80. Plans and estimates are under scrutiny in Executive Engineer, MII Divn., Office.
7	New tank near Narnal	do	17.94	240	The work is included in the World Bank Assistance Pr gramme. Detailed surveys completed. Plans and Estimates under preparation in the Sub-Division.
8	New tank near Jumalapur	do	10.07	87	The work is included in DPA programme and is under Scrutiny in Superintending Engineer, B.C. Bellary.
9	New tank near Upper Hirenal Project	do	191.45	1902	The work is included in the World Bank Assistance Programme. The project was prepared by Major I I. Sub-Division Yermarus and same transmitted to Assistant Executive Engineer, PWD. Kushtagi and under modification in the Executive Engineer, M I. I. Division Raichur.

1	2	3	4	5	6
10	New tank near Watlapur	do	9.07	133	Plans and estimates are under scrutiny in Executive Engineer, M.I.I. Division, Raichur.
			237.53	2579	
	Total 10 Nos, works		285.71 Lakhs	3315 Hectares	

STATEMENT—2

[*Vide* REPLY TO CLAUSE 'b' STARRED QUESTION No. 333 (198)

The List of villages where the tanks are likely to be located in Taluk Lingasugur and Kushtagi in Raichur District.

Sl. No.	Name of Village	Taluk	Estd. cost (Approx.) Rs. in lakhs	Area Irrigated (Hectares)	Remarks
1	New tank near Guntgola	Lingasugur	14.40	324	The work is included in the World Bank Assistance Programme. Site inspected surveys to be taken up.
2	New tank near Antargangi	do	8.00	133	The work is included in the World Bank Assistance Programme Site inspected surveys to be taken up.
		2 Works	22.40	457 Hectares	

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಬುದ್ದಿನಿ ಸಮೀಪದ ಹೊಸ ಕೆರೆಯು ನಿರ್ಮಾಣ ಅವಶ್ಯಕವಿಲ್ಲವೆಂದು ಈಗಾಗಲೇ ಮನವಿಗಳನ್ನು ಸಲ್ಲಿಸಲಾಗಿದೆ. ಆದರೆ, ಈ ಕೆರೆಯ ನಿರ್ಮಾಣದ ಅಂದಾಜು ತಯಾರಾಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ಕೆರೆ ನಿರ್ಮಾಣ ಯೋಜಿತ ಜಾಗದಲ್ಲಿ ಹೆಚ್ಚು ನೀರು ಶೇ ಖಿರಣೆಯಾಗದೆ ಇರುವುದರಿಂದ, ಈ ಕೆರೆಯ ನಿರ್ಮಾಣವನ್ನು ಕೈಬಿಡಬೇಕೆಂದು ನಾನು ಹೇಳಬಯಸುತ್ತೇನೆ.

† ಶ್ರೀ ಎಂ. ಎಂ. ಜೆ ಸದ್ಯೋಜಾತ.—ಈಗಾಗಲೇ ಬಂದ್ದಿನಿ ಸಮೀಪದ ಹೊಸ ಕೆರೆಯು ನಿರ್ಮಾಣಕ್ಕೆ ಸಂಬಂಧಿಸಿದಂತೆ ಅಂದಾಜು ತಯಾರಾಗಿದೆ. ಈ ಕೆರೆಯ ನಿರ್ಮಾಣಕ್ಕಾಗಿ ವಿಶ್ವಬ್ಯಾಂಕಿನಿಂದ ಸಾಲ ಪಡೆಯಲು ಪ್ರಯತ್ನಿಸಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ. ಈ ಬಗ್ಗೆ ತಾಂತ್ರಿಕ ವರದಿ ಕೂಡ ಬಂದಿದೆ. ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಎಂ. ಗಂಗಣ್ಣ.—ವಿಶ್ವಬ್ಯಾಂಕಿನ ನೆರವನ್ನು ಪಡೆಯಲು ಪ್ರಯತ್ನ ಮಾಡಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ಕೆರೆಗಳು ವಿಶ್ವಬ್ಯಾಂಕಿನ ನೆರವಿನಲ್ಲಿ ಕಾರ್ಯಗತವಾಗಿದೆಯೋ ಅಥವಾ ಕಾರ್ಯಗತವಾಗಲಿದೆಯೋ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಉತ್ತರದಲ್ಲಿ ಹತ್ತು ಕೆರೆಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗಿದೆ. ಕೆರೆಗಳ ಕಾಮಗಾರಿಯನ್ನು ಇನ್ನೂ ಪ್ರಾರಂಭ ಮಾಡಿಲ್ಲ.

ಶ್ರೀ ಎಂ. ಗಂಗಣ್ಣ.—ವಿಶ್ವಬ್ಯಾಂಕಿನ ನೆರವಿನ ಯೋಜನೆಯಡಿ ಇವು ಕಾರ್ಯಗತವಾಗಿದೆಯೇ ಅಥವಾ ಕಾರ್ಯಗತವಾಗಲಿದೆಯೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ವಿಶ್ವಬ್ಯಾಂಕಿನಿಂದ ನೆರವು ಪಡೆಯಬೇಕೆಂದು ಸರ್ಕಾರದ ಉದ್ದೇಶವಿದೆ.

MR. SPEAKER.—Questions are over.

QUESTIONS FOR ANSWERS ON THE DAY

(But not taken up)

The Polling Booths and Villages where people have Boycotted from casting vote.

102. SRI M. Y. PATIL (Afzalpur).—Will the Chief Minister be pleased to state ;—

(a) the number of polling booths (villages) wherein voting was boycotted in the last Lok-Sabha Elections ;

(b) whether they are aware as to what are the reasons for not voting ;

(c) if so, whether they would take steps to remove these reasons ?

SRI R. GUNDU RAO (Chief Minister).—

(a)	Polling booths	...	38
	Villages	...	57

(the details of villages are given in the statement laid on the table of the House).